ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.575/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಹುಸೇನಪ್ಪ ತಳವಾರ್** | | |
| **ತಂದೆಃಹೆಸರು** | **ಸಣ್ಣರೆಡ್ಡೆಪ್ಪ** | **ಪಿಡಬ್ಲೂಃ** | **8** |
| **ವಯಸ್ಸು** | **62 ವರ್ಷ** | **ಸಿಡಬ್ಲೂಃ** | **8** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಸೋಮಲಾಪುರ.** | | |

**ದಿನಾಂಕ 25-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ 2 ರಿಂದ 4 ನೇ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1, 4 ರಿಂದ 7, 9 & ಆರೋಪಿಯ ಪರಿಚಯ ಇದೆ. 2-3 ವರ್ಷಗಳ ಹಿಂದ ಮ.12 ಗಂಟೆಗೆ ಅಂಬಾಮಠದ ಪಕ್ಕದಲ್ಲಿದ್ದ ನಮ್ಮ ಜಮೀನಿಗೆ ಹೋಗಿ ಬರುತ್ತಿದ್ದಾಗ, ಬಾಯಿ ಆಗುತ್ತಿತ್ತು, ನಾನು ಬರುವಷ್ಟರಲ್ಲಿ ಅಲ್ಲಿದ್ದ ಜನರು ಹೋಗಿದ್ದರು. 1, ಚಾಸಾ-4 ರಿಂದ 7 ನೇ ಆರೋಪಿತರು ನಾನು ಹೋಗುವಷ್ಟರಲ್ಲಿ ಅಲ್ಲಿಂದ ಹೋಗಿದ್ದರು. ಪೋಲೀಸರು ನನ್ನನ್ನು ವಿಚಾರಣೆ ಮಾಡಿದ್ದರು, ನಾನು ಹೇಳಿಕೆ ಕೊಟ್ಟಿರಲಿಲ್ಲ. ನ್ಯಾಯಾಲಯದ ಮುಂದಿರುವ ಮು. ಮಾ. ಗಳನ್ನು ನಾನು ನೋಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿ.04-11-2022 ರಂದು ಮ.12-10 ಕ್ಕೆ ನೀವು, ಚಾಸಾ-9 ರವರು ಗುನ್ನಾ ಸ್ಥಳದ ಪಕ್ಕದಲ್ಲಿ ನಮ್ಮ ಜಮೀನಿದ್ದು, ಚಾಸಾ-1, 4 ರಿಂದ 7 ರವರು ತಮ್ಮ ಹೊಲದಲ್ಲಿದ್ದಾಗ ಘಟನೆ ಆಗಿತ್ತು ಎಂದು ಹೇಳಿಕೆ ಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ವೀರೇಶನು ಆರೋಪಿತರ ಹೊಲಕ್ಕೆ ಚಾಸಾ-1 ರವರಿಗೆ ಹೇಳದೆ, ಕೇಳದೆ ನೀರು ಬಿಟ್ಟಿದ್ದ ಎಂದು ಹೇಳಿಕೆ ಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ಆಗ ವೀರೇಶನಿಗೆ ಚಾಸಾ-4 ರವರು ನಮ್ಮ ಹೊಲ ಒಣಗಿದೆ, ಅವರಿಗೇಕೆ ನೀರು ಬಿಡುತ್ತೀ ಎಂದು ಕೇಳಿದ್ದ ಎಂದು ಹೇಳಿಕೆ ಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ಆಗ ಆರೋಪಿತರೆಲ್ಲರೂ ಸೇರಿ, 1 ನೇ ಆರೋಪಿ ಚಾಸಾ-4 ರವರಿಗೆ ನಾವು ವೀರೇಶನನ್ನು ಕೇಳಿದ್ದೇವೆ, ನಿನ್ನದೇನಲೇ ಸೂಳೆ ಮಗನೆ ಎಂದು ಬೈದ ಎಂದು ಹೇಳಿಕೆ ಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ಚಾಸಾ-4 ರವರಿಗೆ ಲೇ ಸೂಳೆ ಮಗನೆ ಬೋರ್ ವೆಲ್ ವೀರೇಶನದ್ದು, ನಿಂದೇನಲೇ ಎಂದು ಅವಾಚ್ಯವಾಗಿ ಬೈದು, ಅಂಗಿ ಹಿಡಿದು ಎಳೆದಾಡಿದ್ದ ಎಂದು ಹೇಳಿಕೆ ಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ಆಗ ಬಿಡಿಸಲು ಚಾಸಾ-5 ರವರು ಹೋದರು, ಆಗ 1 ನೇ ಆರೋಪಿ ಕುಡುಗೋಲಿನಿಂದ ಹೊಡೆಯಲು ಹೋದಾಗ ಚಾಸಾ-5 ರವರು ಬಲಗೈ ಅಡ್ಡ ಇಟ್ಟಾಗ, ಆತನ ಬಲಗೈ ಹೆಬ್ಬೆರಳಿಗೆ ನ್ಯಾಯಾಲಯದ ಮುಂದಿರುವ ಕುಡುಗೋಲು ತಗುಲಿ ಗಾಯವಾಗಿತ್ತು ಎಂದು ಹೇಳಿಕೆ ಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ನಂತರ ಚಾಸಾ-7 ರವರು ಬಿಡಿಸಲು ಹೋದಾಗ 2 & 3 ನೇ ಆರೋಪಿತರು ಕೂದಲು ಹಿಡಿದು ಎಳೆದಾಡಿ, ಬೆನ್ನಿಗೆ ಹೊಡೆದರು ಎಂದು ಹೇಳಿಕೆ ಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ಆಗ ಚಾಸಾ-1 ರವರು ಬಿಡಿಸಲು ಹೋದಾಗ 3 ನೇ ಆರೋಪಿ ಆಕೆಯ ಸೀರೆ ಹಿಡಿದು ಎಳೆದಾಡಿ, ಅವಮಾನ ಮಾಡಿದ್ದರು ಎಂದು ಹೇಳಿಕೆ ಕೊಟ್ಟಿದ್ದಿರಿ ಎಂದರೆ. ಆಗ ನೀವು & ಚಾಸಾ-9 ರವರು ಜಗಳ ಬಿಡಿಸಿದ್ದರಿ ಎಂದು ಹೇಳಿಕೆ ಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ಸೇರಿ ನಮಗೆ ಜೀವದ ಬೆದರಿಕೆ ಹಾಕಿದ್ದರು ಎಂದು ಹೇಳಿಕೆ ಕೊಟ್ಟಿದ್ದಿರಿ ಎಂದರೆ ಸರಿಯಲ್ಲ.

ಸದರಿ ವಿಚಾರವಾಗಿ ನಾನು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದಿರುವುದರಿಂದ, ಸಾಕ್ಷಿಯು ಪೋಲೀಯಲ್ಲಗೆ ನೀಡಿದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

ನೀವು ಹೋದಾಗ 1 ನೇ ಆರೋಪಿ ಚಾಸಾ-4 ರಿಂದ 7 ರವರು ಸ್ಥಳದಿಂದ ಹೋಗಿರುತ್ತಾರೆಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಬಾಯಿ ಮಾತಿನಿಂದ ಜಗಳ ಆಗಿದ್ದು ಸುಳ್ಳು ಎಂದರೆ ಸರಿ. ಅವರಿಬ್ಬರ ನಡುವೆ ಏನಾಯಿತು ಎಂಬುದು ನಿಮಗೆ ಗೊತ್ತಿಲ್ಲ ಎಂದರೆ ಸರಿ.

**<u>ಮರು ವಿಚಾರಣೆ ಇಲ್ಲ</u>.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**